ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಈ ಸಹಕಾರ ಸಂಘದ ಸರ್ವ ಸದಸ್ಯರ ಸಭೆ 22-4-1958 ರಲ್ಲಿ ನಡೆದಿದೆ. ಮತ್ತೆ ಇಲ್ಲಿಯವರೆಗೂ ಆ ಸಂಘದ ಸರ್ವಸದಸ್ಯರ ಸಭೆ ನಡೆದಿಲ್ಲ. ಆದರೂ ಕೂಡ ಅದರ ಮೇಲೆ ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಅದರ ಉದ್ದೇಶ ಏನು, ಮತ್ತು ಅದರಲ್ಲಿ ಏನೋ ರಾಜಕೀಯ ಕೈವಾಡ ಇರಬೇಕಲ್ಲವೇ?

Sri KONDAJJI BASAPPA.—We have called for explanation of the officer and officials for the long delay and for not having taken immediate steps in the matter.

ಶ್ರೀ ಕೆ. ಲಕ್ಕಪ್ಪ.—ಸಹಕಾರ ಸಂಘಗಳಲ್ಲಿ ಹಣ ದುರುಪಯೋಗವಾಗಿರುವ ನೂರು ಪ್ರಶ್ನೆಗಳು ಈ ಸಭೆಯಲ್ಲಿ ಬರುತ್ತಿವೆ, ಸಹಕಾರ ಸಂಘದ ನೀತಿ ವಿಫಲವಾಗಿರುವುದು ಇದಕ್ಕೆ ಕಾರಣ ಅಲ್ಲವೇ?

Sri KONDAJJI BASAPPA.—I cannot answer that question.

Revenue Officers posted during 1962 General Elections for election work.

*Q.—414. Sri F. S. TAVARE (Shiggaon).—

Will the Government be pleased to state :—

(*a*) number of Revenue Officers posted during 1962 General Elections for election work in Hangal, Hirekerur and Hubli in Dharwar District;

(*b*) the amount of daily allowance, T. A. and Special allowance admissible to them as per election rules;

(*c*) out of that, the amount paid to them under different heads together with the balance of amount payable to them;

(*d*) the reasons for not making payment of the balance so far;

(*e*) when they propose to pay the same to them?

A.—Sri M. V. RAMA RAO (Minister for Law).—

(*a*) (1) Hangal 11 (All are Presiding Officers).
(2) Hirekerur 3 (One Presiding Officer and two Polling Officers).
(3) Hubli 1 (Polling Officer).

(*b*) (1) D. A. to Presiding Officers ... Rs. 4-00 per day
D. A. to Polling Officers ... 3-50 per day
(2) T. A. as per the Mysore Civil Service Rules.
(3) No special allowance is admissible under the rules.

(*c*)

	Total amount payable under D.A.	T.A.	*Total amount paid*	*Balance payable*
(1) Hangal ...	88-00	89-86	177-86	Nil
(2) Hirekerur ...	22-00	...	22-00	
(3) Hubli ...	7-00	...	7-00	
Total Rs.	117-00	89-86	206-86	

(*d*) Does not arise in view of reply to question (*c*)
(*e*) Do do

ಶ್ರೀ ಎಫ್. ಎಸ್. ತಾವರೆ.—ಉಪಪ್ರಶ್ನೆಗಳೇನೂ ಇಲ್ಲ.

Repairs to tanks in Hosadurga Taluk.

*Q.—429. Sri G. T. RANGAPPA (Hosadurga).—

Will the Government be pleased to state :—

(*a*) whether they have received any representations from the public for the repairing of Devapura, Kodihalli, Menasinodu and Somanathapura tanks in Hosadurga Taluk ;

(*b*) if so, when ;

(*c*) the reasons for not taking any action so far on these representations ?

A.—Sri ALUR HANUMANTHAPPA (Deputy Minister for Minor Irrigation).—

(*a*) Yes (only for Devapura and Kodihalli tanks).
(*b*) Devapura tank—since 1964
Kodihalli tank—since 1947.
(*c*) Suitable action has been taken to redress the grievances of the petitioners.

ಶ್ರೀ ಜಿ. ಟಿ. ರಂಗಪ್ಪ.—ಸ್ವಾಮಿ, ಕೋಡಿಹಳ್ಳಿ ಕೆರೆಯ ಸಂಬಂಧದಲ್ಲಿ 1947ನೇ ಇಸವಿಯಿಂದಾಗಾಯ್ತು, ಸರ್ಕಾರಕ್ಕೆ ಮನವಿಗಳು ಬಂದರೂ ಕೂಡ ಆ ಕೆರೆಯ ದುರಸ್ತಿಯನ್ನು ಮಾಡುವುದಕ್ಕೆ ಸರ್ಕಾರದವರಿಗೆ ಇರುವ ತೊಂದರೆಯೇನು ?

ಶ್ರೀ ಆಲೂರು ಹನುಮಂತಪ್ಪ.—ಆ ಕೆರೆಯ ಎಸ್ಟಿಮೇಟ್‌ಮಾಡಿ, ಆ ಕೆಲಸವನ್ನು ಮಾಡುವುದಕ್ಕೆ ಕಂಟ್ರಾಕ್ಟರಿಗೆ ಕೊಟ್ಟಿತ್ತು. ಕಂಟ್ರಾಕ್ಟರು ಆ ಕೆಲಸವನ್ನು ಮಾಡುವಾಗ ಏರಿಯಲ್ಲಿ ಬಂಡೆ ಸಿಕ್ಕಿತು. ಅದಕ್ಕೋಸ್ಕರ ಅದರ ಎಸ್ಟಿಮೇಟನ್ನು ಮತ್ತೆ ರಿವೈಜ್ ಮಾಡಬೇಕಾಯಿತು. ಆದ್ದರಿಂದ ಆ ಕೆಲಸವನ್ನು ಮಾಡುವುದು ಸ್ವಲ್ಪ ತಡವಾಯಿತು.

ಶ್ರೀ ಜಿ. ಟಿ. ರಂಗಪ್ಪ.—ಸೋಮನಾಥಪುರದ ಕೆರೆಯನ್ನು ದುರಸ್ತು ಮಾಡಬೇಕೆಂದು ಅಲ್ಲಿನ ಜನಗಳಿಂದ ಮನವಿಗಳು ಬಂದಿರುವುದು ನಿಜವೇ ?

ಶ್ರೀ ಆಲೂರು ಹನುಮಂತಪ್ಪ.—ಅದು ಬಂದಿಲ್ಲ.

ಶ್ರೀ ಜಿ. ಟಿ. ರಂಗಪ್ಪ.—ಎಸ್ಟಿಮೇಟಾಯ್ತು ?

ಶ್ರೀ ಆಲೂರು ಹನುಮಂತಪ್ಪ.—ಕೋಡಿಹಳ್ಳಿದು ರೂ. 28,600. ದೇವಪುರದ್ದು ಇನ್ನೂ ಎಸ್ಟಿಮೇಟು ತಯಾರಾಗುತ್ತಾ ಇದೆ.

ಶ್ರೀ ಎಚ್. ಡಿ. ದೇವೇಗೌಡ.—1947ನೆ ಇಸವಿಯಲಾಗಾಯಿತು ಮನವಿ ಬಂದು 28 ಸಾವಿರ ರೂಪಾಯಿ ಖರ್ಚಿನಲ್ಲಿ ಒಂದು ಕೆರೆ ರಿಪೇರಿ ಮಾಡುವುದಕ್ಕೆ ಎಷ್ಟು ವರ್ಷ ಬೇಕು ? 17 ವರ್ಷ ಬೇಕೆ! ಒಂದು ಎಸ್ಟಿಮೇಟನ್ನು ಸ್ಕ್ರುಟಿನಿಮಾಡಿ ಮಂಜೂರುಮಾಡುವುದಕ್ಕೆ ? ಈ ಇಲಾಖೆಯಲ್ಲಿ ಸರ್ಕಾರಿ ಅಧಿಕಾರಿಗಳು ಎಷ್ಟು ಜನರಿದ್ದಾರೆ. ಈ ಇಲಾಖೆಗೆ ಒಬ್ಬ ಪ್ರತ್ಯೇಕ ಉಪಮಂತ್ರಿ ಇದ್ದಾರೆ. ಇದಕ್ಕೆ ಇನ್ನೆಷ್ಟು ಜನ ಬೇಕಾಗುತ್ತದೆ!

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸಭೆಗೂ ಗೊತ್ತಿದೆ. ಸದಸ್ಯರಿಗೂ ಗೊತ್ತಿದೆ, ಈ 40 ಕೆರೆಗಳ ಪರಿಸ್ಥಿತಿ ಏನಿತ್ತೆಂದು. ಅವು ರೆವಿನ್ಯು ಇಲಾಖೆಯಲ್ಲಿ ಮೇನ್‌ಚೇನ್ ಮಾಡಿದ ಕೆರೆಗಳು. ಇತ್ತೀಚೆಗೆ ಆಕ್ಟ್ ಪಾಸ್ ಮಾಡಿದ್ದೇವೆ. ತಾಲ್ಲೂಕು ಬೋರ್ಡಿಗೆ ವಹಿಸಿದಂಥ ಕೆರೆಗಳನ್ನು ಬಿಟ್ಟು, ಬಾಕೀದನ್ನು ಪಿ.ಡಬ್ಲು.ಡಿ. ವಹಿಸಿಕೊಂಡಿದೆ. ಇನ್ನುಮೇಲೆ ಕೆರೆ ಜವಾಬ್ದಾರಿ ಪಿ.ಡಬ್ಲು.ಡಿ.ಗೆ ಬರುತ್ತದೆ.